ಕರ್ನಾಟಕ ವಿಧಾನಸಭೆ

281 ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ)

ಅ. ಚಿಕ್ಕಬಳ್ಳಾಪುರ ಜಿಲ್ಲೆಯ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಧಿಕವಾಗಿರುವುದರಿಂದ ಅನೇಕ ಮಕ್ಕಳು, ವೃದ್ಧರಿಗೆ ಎಲುಬು ನೋವುಗಳು ಮತ್ತು ವಿವಿಧ ರೋಗಗಳಿಂದ ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ. ಬಂದಿದ್ದಲ್ಲಿ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆಯೇ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪರ್ಯಾಯ ಕುಡಿಯುವ ನೀರಿನ ಯೋಜನೆಗಳನ್ನು ಮತ್ತು ಡಿ–ಫ್ಲೋರಿಡೇಶನ್ ಘಟಕಗಳನ್ನು ಅಳವಡಿಸಲಾಗಿದೆ. ತಾಲ್ಲೂಕಲುವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.

ಇ. ಪ್ರತಿ ತಾಲ್ಲೂಕುಗಳಲ್ಲಿ ಪ್ರತಿ ಪಂಚಾಯತಿಯಲ್ಲೂ ಒಂದು ಕೆರೆಯ ನೀರನ್ನು ಕುಡಿಯುವ ನೀರಿಗಾಗಿ ಮೀಸಲಿಡಲಾಗಿದೆಯೇ; ಇಟ್ಟಿದ್ದರೆ, ಆ ಕೆರೆಯಿಂದ ಆ ಪಂಚಾಯ್ತಿಯ ಎಲ್ಲಾ ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಸಲು ಕ್ರಮತೆಗೆದುಕೊಳ್ಳಲಾಗಿದೆಯೇ (ವಿವರ ಒದಗಿಸುವುದು);

ಪ್ರತಿ ಪಂಚಾಯಿತಿಯಲ್ಲಿ ಕುಡಿಯುವ ನೀರಿಗಾಗಿಯೇ ಕೆರೆಯನ್ನು ಮೀಸಲಾಗಿರಿಸಿರುವುದಿಲ್ಲ.

ಈ. ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಅಧಿಕಾವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ; ಬಂದಿದ್ದರೆ, ಎಷ್ಟು ಹಳ್ಳಿಗಳಲ್ಲಿ ಜನರು ಫ್ಲೋರೈಡ್ ನೀರನ್ನು ಸೇವಿಸುತ್ತಿದ್ದಾರೆ, ಇದಕ್ಕಾಗಿ ಸರ್ಕಾರದದಿಂದ ಫ್ಲೋರೈಡ್‌ರಹಿತ ಕುಡಿಯುವ ನೀರನ್ನು ಒದಗಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ (ಮಾಹಿತಿಯನ್ನು ಒದಗಿಸುವುದು).

ಬಂದಿದೆ. ಈ ತಾಲ್ಲೂಕುಗಳಲ್ಲಿನ ಸುಮಾರು 292 ಜನವಸತಿಗಳ ಒಟ್ಟು 2.195ಲಕ್ಷ ಜನತೆ ಫ್ಲೋರೈಡ್‌ಯುಕ್ತ ನೀರು ಸೇವಿಸುತ್ತಿದ್ದಾರೆ. ತಾಲ್ಲೂಕುವಾರು ಕೈಗೊಂಡಿರುವ ಕ್ರಮದ ಮಾಹಿತಿಯನ್ನು **ಅನುಬಂಧ–1ರಲ್ಲಿ** ನೀಡಲಾಗಿದೆ.

ಸಂಗ್ರಾಅಪ 17 ಗ್ರಾನೀಸ(1) 09

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು